ಮಂತ್ರಿಗಳ ಹೇಳಿಕೆ

ಕೈಗಾದಲ್ಲಿ ವ್ಯಕ್ತಿಯು ಪವರ್ ಕಾರ್ಪೊರೇಷನ್‌ನವರಿಂದ ಅಣುವಿದ್ಯುತ್ ಸ್ಥಾವರದ ಎರಡು ಘಟಕಗಳ ಸ್ಥಾಪನೆ.

* ಶ್ರೀ ಎಸ್.ಎಂ.ಕೃಷ್ಣ (ಉಪಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಭಾರತ ಸರ್ಕಾರದ ಸಂಸ್ಥೆಯಾದಂಥ ನ್ಯೂಕ್ಲಿಯಾರ್ ಪವರ್ ಕಾರ್ಪೊರೇಷನ್, ಕೈಗಾದಲ್ಲಿ 220 ಮೆ.ವ್ಯಾ.ಸಾಮರ್ಥ್ಯದ ಎರಡು ಘಟಕಗಳು ಅಣು ವಿದ್ಯುತ್ ಸ್ಥಾವರ ಸ್ಥಾಪಿಸುವ ಕೆಲಸವನ್ನು ಕೈಗೊಂಡಿದೆ. 13ನೇ ಮೇ 94 ರಂದು ಮಧ್ಯಾಹ್ನ ಒಂದನೆಯ ಘಟಕದ ಕಂಟೇನೇರ್ ಕಟ್ಟಡದ ಹೂಮನ್ ಒಳಭಾಗದಿಂದ ಕೆಲವು ಕಾಂಕ್ರೀಟ್ ಭಾಗಗಳು ಕುಸಿದಿರುತ್ತವೆ. ಈ ವಿಷಯದಲ್ಲಿ ದಿನಾಂಕ : 31-5-94ರಂದು ಮಾನ್ಯ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಪತ್ರವನ್ನು ಬರೆದು ಈ ಅನಾಹುತವು ಬೃಹದಾಕಾರವಾಗಿ ಇಲ್ಲದಿದ್ದರೂ ಇದರಿಂದಾಗಿ ಜನಸಾಮಾನ್ಯರ ಮನಸ್ಸಿನಲ್ಲಿ ಅಣು ಸ್ಥಾವರವನ್ನು ಸ್ಥಾಪಿಸುವ ಬಗ್ಗೆ ಆತಂಕ ಉಂಟಾಗಿರುತ್ತದೆ. ಈ ವಿಷಯದಲ್ಲಿ ಜನಸಾಮಾನ್ಯರಲ್ಲಿ ಈ ಆತಂಕವನ್ನು ನಿವಾರಿಸಲು ಸೂಕ್ತವಾದ ತನಿಖೆಯನ್ನು ನಡೆಸಬೇಕೆಂದು ಮತ್ತು ತನಿಖೆಯ ವರದಿಯನ್ನು ಬಹಿರಂಗ ಪಡಿಸಬೇಕೆಂದು ಕೇಳಿಕೊಂಡಿರುತ್ತಾರೆ. ಭಾರತ ಸರ್ಕಾರದಿಂದ ಬಂದ ವರದಿಯ ಪ್ರಕಾರ ಈ ವಿಷಯದಲ್ಲಿ ತನಿಖೆಯನ್ನು ನಡೆಸಲು ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್ ಒಂದು ಸಮಿತಿಯನ್ನು ನಿಯೋಜಿಸಿದೆ, ಅಟಾಮಿಕ್ ಎನರ್ಜಿ ರೆಗ್ಯುಲೇಟರಿ ಬೋರ್ಡ್ ಭಾರತ ಸರ್ಕಾರದ ಪ್ರತ್ಯೇಕ ಸಂಸ್ಥೆ, ಇದೂ ಸಹ ತನಿಖೆಗಾಗಿ ತಜ್ಞರ ಸಮಿತಿಯನ್ನು ನೇಮಿಸಿದೆಯೆಂದು, ಹಾಗೂ ಈ ಎರಡು ಸಮಿತಿಗಳ ವರದಿಯು ಬಂದನಂತರ ವರದಿಯನ್ನು ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿರುತ್ತಾರೆ.

ಶ್ರೀ ಆರ್.ವಿ ದೇಶ್‌ಪಾಂಡೆ : ಮಾನ್ಯ ಅಧ್ಯಕ್ಷರೆ, ಮೊನ್ನೆ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ಮಾನ್ಯ ಉಪಮುಖ್ಯಮಂತ್ರಿಗಳು ಇಲ್ಲಿ ಇರಲಿಲ್ಲ. ಇಲ್ಲಿ ತಾವು ಹೇಳಿರುವುದು ನಿಜ. ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್ ಮತ್ತು ಅಟಾಮಿಕ್ ಎನರ್ಜಿ ರೆಗ್ಯುಲೇಟರಿ ಬೋರ್ಡ್‌ನವರು ಎರಡು ಸಮಿತಿಗಳನ್ನು ರಚನೆ ಮಾಡಿದ್ದಾರೆ. ಒಂದು ರೀತಿಯ ಭಯದ ವಾತಾವರಣ ಕೇವಲ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾತ್ರವಲ್ಲ ಇಡೀ ನಾಡಿನಲ್ಲಿ, ದೇಶದಲ್ಲಿ ಹಬ್ಬಿದೆ. ಈ ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್‌ನಿಂದ ಅಪಾಯವಿದೆಯೋ ಇಲ್ಲವೋ ಒಂದು ಕಾಲದಲ್ಲಿ ಈ ಪ್ರಾಜೆಕ್ಟ್ ಸ್ಥಾಪನೆಯಾದಾಗ ಆ ಸಮಯದಲ್ಲಿಯೂ ಸಹ ಇದರ ಬಗ್ಗೆ ಸಾಕಷ್ಟು ವಿರೋಧ ಎಲ್ಲಾ ವರ್ಗಗಳಿಂದ ವ್ಯಕ್ತವಾಯಿತು. ಆ ಸಮಯದಲ್ಲಿ ನಮ್ಮ ಶಾಸಕರ ಸಮಿತಿಗಳನ್ನು ಬೇರೆ ಬೇರೆ ನ್ಯೂಕ್ಲಿಯರ್ ಪವರ್ ಸ್ಟೇಷನ್‌ಗೆ ಕಳಿಸಿ, ರಾಜರಾಮಣ್ಣರಂಥ ಹಿರಿಯ ವಿಜ್ಞಾನಿಗಳನ್ನು ಕರೆಯಿಸಿ, ಕೆಲವು ಗ್ರಾಮಾಂತರ ಪ್ರದೇಶಗಳಿಗೆ ವಿಜ್ಞಾನಿಗಳು ಹೋಗಿ ಈ ರೀತಿ ಭಯವನ್ನು ಪಡತಕ್ಕ ಕಾರಣವಿಲ್ಲ ಎನ್ನುವ ಬಗ್ಗೆ ಹೇಳಿಕೆ ನೀಡಲು ಪ್ರಯತ್ನ ಮಾಡಿದ್ದರು. ಆದರೆ ಮೊನ್ನೆ ಏನು ಈ ಕಂಟೇನರ್ಸ್ ರೂಮ್ ಕೊಲ್ಯಾಪ್ಸ್

ಆಯಿತು ಅದರಿಂದ ನಮ್ಮಂಥವರಿಗೆ ಸಹ ಭಯದ ವಾತಾವರಣ ಉಂಟಾಗಿದೆ. ನಿಜವಾಗಿಯೂ ಆಗ ಏನು ವಿವಿಧ ವರ್ಗದವರು ಇದಕ್ಕೆ ವಿರೋಧ ಮಾಡಿ ಪ್ರಸ್ತಾಪ ಮಾಡಿದ್ದರು. ಅದು ಸರಿ ಎಂದು ನಮಗೂ ಸಹ ಕಾಣುತ್ತಿದೆ. ನಾನು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೆ. ಅದೇ ರೀತಿ ಪ್ರಧಾನ ಮಂತ್ರಿಗಳಿಗೂ ಸಹ ಪತ್ರವನ್ನು ಬರೆದಿದ್ದೆ. ಅದೇ ರೀತಿ ಎನ್‌ಟಿಸಿಪಿ ಅಧ್ಯಕ್ಷರಿಗೂ ಪತ್ರವನ್ನು ಬರೆದಿದ್ದೆ. ಮತ್ತು ಅಟಾಮಿಕ್ ಎನರ್ಜಿ ರೆಗ್ಯುಲೇಟ್‌ರಿ ಬೋರ್ಡ್‌ನ ಅಧ್ಯಕ್ಷರಿಗೆ ಕೂಡ ಪತ್ರವನ್ನು ಬರೆದಿದ್ದೆ. ರೆಗ್ಯುಲೇಟ್‌ರಿ ಬೋರ್ಡ್‌ನ ಅಧ್ಯಕ್ಷರು ನನಗೆ ಒಂದು ಪತ್ರವನ್ನು ಬರೆದು ಅವರು ಏನು ಹೇಳುತ್ತಾರೆಂದರೆ.

"It is true that there have been some deviations at site from designs which were presented to the AERB at the time of Review. But whether or not and to what extent these deviations may be responsible for the domb failure is a matter which will be clear only when the ivestigating committees which are looking into this mishap complete their evaluations."

He further says:

"AERB has ordered stoppage of construction work on the inner containment structure at Kaiga I and II as well as Rajasthan III & IV Projects at Kota and this will be relaxed only after the results for the Kaiga mishap are established and corrective action taken to prevent recurrence of such failure."

ಇವತ್ತು ಇಲ್ಲಿ ರೆಗ್ಯುಲೇಟರಿ ಬೋರ್ಡ್ ಛೇರ್‌ಮನ್ ಅವರು ಒಪ್ಪಿಕೊಳ್ಳುತ್ತಾರೆ ಡೀವಿಯೇಷನ್ ಆಗಿದೆ, ನಾವು ಇನ್ನರ್ ಡೋಮ್ ಕೆಲಸ ನಿಲ್ಲಿಸುವುದಕ್ಕೆ ಆದೇಶ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ನಾನು ಸರ್ಕಾರದಲ್ಲಿ ಏನು ಕೇಳುತ್ತಿದ್ದೇನೆ ಎಂದರೆ ಯಾವಾಗ ರೆಗ್ಯುಲೇಟರಿ ಬೋರ್ಡ್ ನವರು ತಮ್ಮ ಡಿಸೈನ್‌ಲ್ಲಿ ಡೀವಿಯೇಷನ್ ಮಾಡಿದ್ದೇವೆಂದು ಒಪ್ಪಿಕೊಂಡಿದ್ದಾರೆ, ಯಾವಾಗ ಇನ್ನರ್ ಡೋಮ್ ಕೆಲಸವನ್ನು ಅವರು ನಿಲ್ಲಿಸಿದ್ದಾರೆ. Why not the entire work be stopped?

ಏಕೆಂದರೆ suppose the report comes stating that the design is defective, ಅದಕ್ಕೆ ಹಣ ಖರ್ಚು ಮಾಡಿ ವ್ಯರ್ಥ ಮಾಡುತ್ತಿದ್ದೀರಿ ಎಂದಲ್ಲವೇ?

ರಾಜ್ಯ ಸರ್ಕಾರ ರಾಜ್ಯದ ಜನದ ಹಿತದೃಷ್ಟಿಯಿಂದ ಮತ್ತು ದೇಶದ ಜನರ ಹಿತ ದೃಷ್ಟಿಯಿಂದ ಮುಂದೆ ಆದಾಯ ಆಗಬಾರದು, ಅದರ ಸಲುವಾಗಿ ಈ ಎರಡು ಸಮಿತಿಗಳ ರಿಪೋರ್ಟ್ ಬರುವವರೆಗೂ ಏಕೆ ಕೆಲಸವನ್ನು ನಿಲ್ಲಿಸಬಾರದು. ನೀವು ಕೆಲಸವನ್ನು ನಿಲ್ಲಿಸಿದರೆ ಅವರು ಒಪ್ಪಿಕೊಳ್ಳುತ್ತಾರೆ. ಡೀವಿಯೇಷನ್ ಆಗಿದೆ, ಇನ್ನರ್ ಡೋಮ್ ಕೆಲಸ ಸ್ಟಾಪ್ ಮಾಡಿದ್ದೇವೆ. Suppose other work is done and tomorrow the report says that failure is be cause of this, this becomes a waste of money. Why you should not impress upon the Government of India to stop the entire work till the two reports of the committees come. No.2 ಈ ಬಗ್ಗೆ ಮಾನ್ಯ ಪ್ರಧಾನಮಂತ್ರಿಯವರಿಗೂ ನಾನು ಪತ್ರ ಬರೆದಿದ್ದೆ ಅವರೂ ಸಹ ನನಗೆ 13-7-94ರಲ್ಲಿ ರಿಪ್ಲೈ ಕೊಟ್ಟಿದ್ದಾರೆ.

"I have received your letter of 28th June 1994 regarding Kaiga Nuclear Project and I have noted your concern."

So, at the Prime Minister level also there is concern. ಹಾಗಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. When the Regulatory Board, which is to take care of all safety, has admitted that there is deviation and when he has ordered for stopping inner dome work, why the Karnataka Government does not impress upon the Government of India or the Nuclear Power Corporation to stop the entire work on Kaiga projects till reports are published? ಎರಡನೆಯದು ರಿಪೋರ್ಟ್ ಪಬ್ಲಿಕ್ ಆದ ನಂತರ ಅದಕ್ಕಿಂತ ಮುಖ್ಯವಾದುದ್ದು ಏನಿದೆ. ಇವತ್ತು ಜನರಲ್ಲಿ ಕಾನ್‌ಫಿಡೇನ್ಸ್ ಹೋಗಿಬಿಟ್ಟಿದೆ. ಈ ಪ್ರಾಜ್‌ಕ್ಟ್‌ನಿಂದ ಅನಾಹುತವಾಗುತ್ತದೆ ಎಂಬ ಭಾವನೆ ಎಲ್ಲಾ ಕಡೆ ಬಂದಿದೆ. Psychologically they are all depressed. ಹಲವಾರು ಕಡೆಗಳಲ್ಲಿ ಪೇಜಾವರ ಸ್ವಾಮಿಯವರಿಂದಲೂ ಎಜಿಟೇಶನ್ ನಡೆಯುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ನಾನು ಏನು ಹೇಳುತ್ತೇನೆ ಎಂದರೆ ಎರಡು ಕಮಿಟಿಗಳ ರಿಪೋರ್ಟ್ ಬಂದ ನಂತರ ಲೊಕಲ್ ಭಾಷೆಯಲ್ಲಿ ಪಬ್ಲಿಷ್ ಮಾಡಬೇಕಾಗುತ್ತದೆ. What are those reports that should be published in local languages.

ಮತ್ತೊಂದು ಅಲ್ಲಿ ಎಂಟ್ರಿಗೆ ಬಾರ್ ಇದೆ,they don't allow the Press to go there; they don't allow the common people to go there. I ask you why? ಏಕೆ ಕಷ್ಟವಾಗುತ್ತದೆ ಎಂದು ನಾನು ಕೇಳಿದೆ. ನಿಮಗೆ ಗ್ಯಾರಂಟಿ

ಇದೆ. ಇದರಿಂದ ತೊಂದರೆಯಾಗುವುದಿಲ್ಲ ಎಂಬ ಭರವಸೆ ಇದ್ದರೆ why are you stopping the common people from seeing it. ಇವತ್ತು ಸರ್ಕಾರ ಒತ್ತಾಯ ತಂದು they should allow everybody to see. Because are not allowing; fear is created.

ಸಂಶಯ ನಿರ್ಮಾಣವಾಗುತ್ತದೆ . ಈ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕಿಂತ ಮೊದಲು ಏನು ಹೇಳುತ್ತೇನೆ ಎಂದರೆ 2 ಕಮಿಟಿಗಳು ಏನು ಅಪಾಯಿಂಟ್ ಆಗಿದೆ. ಒಂದು Nuclear Power Corporation Some scientists are involved there, ಮತ್ತೊಂದು Regulatory Board ನವರು ಮಾಡಿದ್ದಾರೆ .

ನಾನು ಮಾನ್ಯ ಪ್ರಧಾನಮಂತ್ರಿಯವರಿಗೆ ಪತ್ರ ಬರೆದಿದ್ದೆ.Let there be an independent committee constituted with people who are pro and against nuclear power. There are scientists who are pro and against it. There are environmentalists. ನಿಜವಾಗಿಯೂ ಸತ್ಯವಾದ ಪರಿಸ್ಥಿತಿ ಬರಬಹುದು. Suppose those who are interested in nuclear energy, if they are only in the committee, you cannot get a balanced safe report. ಈ ದೃಷ್ಟಿಯಿಂದ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಮತ್ತು NPC authorities ಮೇಲೆ ಒತ್ತಾಯ ತಂದು ಈ ಕೆಲಸವನ್ನು ಮಾಡಬೇಕೆಂದು ತಮ್ಮ ಮುಖಾಂತಾರ ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಸ್. ಎಂ ಕೃಷ್ಣ :- ಮಾನ್ಯ ಅಧ್ಯಕ್ಷರೇ ಈ ದುರದೃಷ್ಟಕರ ಘಟನೆಯಿಂದ ಆ ಭಾಗದ ಜನರು ಸ್ವಾಭಾವಿಕವಾಗಿ ಈ ಯೋಜನೆಯ ಬಗ್ಗೆ ಕಳವಳವನ್ನು, ಭೀತಿಯನ್ನು ಮತ್ತು ಸಂಶಯವನ್ನು ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರ್ಕಾರದಲ್ಲೂ ಮಾನ್ಯ ಪ್ರಧಾನ ಮಂತ್ರಿಯವರು ಈ ವಿಚಾರದಲ್ಲಿ ರಾಜ್ಯ ಸಭೆಯಲ್ಲಿ, ಲೋಕಸಭೆಯಲ್ಲಿ ಹೇಳಿಕೆಯನ್ನು ಮಾಡಿದ್ದಾರೆ. ಈ ಹೇಳಿಕೆಯ ಆಧಾರದ ಮೇಲೆ ನಾನು ಏನು ತಿಳಿಯಬಹುದು ಎಂದರೆ ಇದನ್ನು ಬಹಳ ಗಂಭೀರವಾಗಿ ಅವರು ಪರಿಶೀಲಿಸಿದ್ದಾರೆ. ಇಲ್ಲಿ ಆದ ಘಟನೆಯಿಂದ ರಾಜ್ಯಸ್ಥಾನದಲ್ಲೂ ಕೂಡ ಕೆಲಸವನ್ನು ಸ್ಥಗಿತಗೊಳಿಸಬೇಕು ಎಂಬ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಜೊತೆಗೆ 2 ತನಿಖಾ ಮಂಡಳಿ Regulatory Board and Nuclear Power Corporation ಇವೆರಡು ಸಮಿತಿಗಳವರೂ ತನಿಖೆ ಮಾಡುತ್ತಿದ್ದಾರೆ. ಆದುದರಿಂದ ಈ ಎರಡು ತನಿಖಾ ವರದಿ ಬರುವವರೆಗೂ ಕೂಡ ಯಾವುದೇ ಒಂದು ನಿರ್ಣಯಕ್ಕೆ ಬರುವಂತಹ ಸಿಂಧು-ಅಥವಾ ಅಸಿಂಧೂತನವನ್ನು ಪರ್ಯಾಲೋಚನೆ ಮಾಡುವುದಕ್ಕೆ ಆಗುವುದಿಲ್ಲವೆಂದು ತಮ್ಮಲ್ಲಿ ವಿನಂತಿಸುತ್ತೇನೆ. ನಾನೂ ಸಹ ನಾಲ್ಕು ದಿವಸಗಳ ಹಿಂದೆ ಆ ಸ್ಥಳಕ್ಕೆ ಹೋಗಿದ್ದೆ. ಕೆಲವು ದಿವಸಗಳವರೆಗೆ ಪ್ರೆಸ್‌ನವರನ್ನು ಒಳಗೆ

ಬಿಡಲಿಲ್ಲ. ಕಾರಣವೇನು ಎಂದು ಕೇಳಿದೆ, ಎನ್‌ಕ್ವಯರಿ ಕಮಿಟಿ ಎಂದು ಏನು ಮಾಡಿದ್ದಾರೆ, ಎನ್‌ಕ್ವಯರಿ ಕಮಿಟಿಯ ಮೆಂಬರ್‌ಗಳು ಬಂದು ಸ್ಥಳವನ್ನು ಪರಿಶೀಲನೆ ಮಾಡುವವರೆಗೂ ನಾವು ಯಾರನ್ನು ಬಿಡಬಾರದು ಎಂಬ ದೃಷ್ಟಿಯಿಂದ ಬಿಟ್ಟಿಲ್ಲವೆಂದು ಹೇಳಿದರು. ಜೊತೆಗೆ ಅದು ಒಂದು ರೀತಿಯ ಕ್ಲಾಸಿಫೈಡ್ ಏರಿಯಾ ಇದ್ದ ಹಾಗೆ ಇತ್ತು. ಬಹಳ ಬಿಗಿಯಾದ ಬಂದೋಬಸ್ತು ಅಲ್ಲಿ ಇತ್ತು ಇದನ್ನು ವಿನಾಕಾರಣ ಮಾಡಿದ್ದಾರೆ ಎಂದು ನನಗೆ ಅನಿಸಿತು. ಅಲ್ಲಿ ತಾವು ಕೆಲವು ಮುಖಂಡರುಗಳನ್ನು ಒಳಗೆ ನೋಡುವುದಕ್ಕೆ ಬಿಟ್ಟಿದ್ದರೆ, ಅದು ಹೇಗೆ ಕುಸಿಯಿತು ಎನ್ನುವುದನ್ನು ಅವರು ಬಾಕಿ ಜನರಿಗೆ ತಿಳುವಳಿಕೆ ಹೇಳುತ್ತಿದ್ದರು. ಅಥವಾ ಕಾರಣಗಳನ್ನು ಹೇಳುತ್ತಿದ್ದರು. ಆದುದರಿಂದ ಆ ಕಾನ್‌ಫಿಡೆನ್ಸ್ ಏನು ಹೋಗಿದೆ ಆ ಕಾನ್‌ಫಿಡೆನ್ಸ್ ರಿಸ್ಟೋರ್ ಮಾಡಬೇಕಾಗಿರತಕ್ಕಂಥಾದ್ದು ಈ ನೂಕ್ಲಿಯರ್ ಪವರ್ ಕಾರ್ಪೋರೇಷನ್‌ರವರದು ಮತ್ತು ಅಟೋಮಿಕ್ ಎನರ್ಜಿ ರೆಗ್ಯೂಲರೇಟರಿ ಬೋರ್ಡ್ ಅವರದು ಕೇಂದ್ರ ಸರ್ಕಾರದವರದು, ರಾಜ್ಯ ಸರ್ಕಾರದವರದು, ವಿರೋಧ ಪಕ್ಷದವರದು ಎಲ್ಲರದು ಇದೆ. ಆದುದರಿಂದ ನಾವು ಎಲ್ಲಾ ಒಟ್ಟಾಗಿ ಸೇರಿ ಇದರ ಸಾಧಕ ಭಾಧಕಗಳನ್ನು ಗಂಭೀರವಾಗಿ ಪರಿಶೀಲಿಸಿ ಅನಂತರ ಇದರ ಬಗ್ಗೆ ಮುಂದುವರೆಯಬಹುದಾಗಿದೆ. ಇಲ್ಲಿ ಎಷ್ಟು ಹಣ ಖರ್ಚಾಗಿದೆ ಎನ್ನುವುದು ಮುಖ್ಯವಲ್ಲ. Safety of the people living in that region, has to get paramount priority over anything else. ಅದರಲ್ಲಿ ನಮ್ಮ ಸರ್ಕಾರದ ಸಹಮತ ಇದೆ ಎನ್ನುವುದನ್ನು ಹೇಳುತ್ತೇನೆ. ಮತ್ತು ಇದಕ್ಕೆ ಅವರು ಏನು ತನಿಖಾ ಸಮಿತಿಗಳನ್ನು ಮಾಡಿದ್ದಾರೆ ಅವರು ಕೆಲವೇ ದಿವಸಗಳಲ್ಲಿ ವರದಿಯನ್ನು ಬಹಿರಂಗಗೊಳಿಸಿದ್ದಾರೆ. ವರದಿ ಬಹಿರಂಗವಾದ ಮೇಲೆ ಅನಂತರ ನಾವೂ, ನೀವೂ ಕುಳಿತು ಮುಂದೆ ಏನು ಕಾರ್ಯಕ್ರಮಗಳನ್ನು ರಾಜ್ಯಮಟ್ಟದಲ್ಲಿ ತೆಗೆದುಕೊಳ್ಳಬಹುದು ಎನ್ನುವುದನ್ನು ತೀರ್ಮಾನ ಮಾಡಬಹುದಾಗಿದೆ.

ಶ್ರೀ ಆರ್.ವಿ.ದೇಶಪಾಂಡೆ : ನಾನು ಹೇಳುವುದೆನೆಂದರೆ ಈ ತನಿಖಾ ವರದಿಯನ್ನು ಲೋಕಲ್ ಲಾಂಗ್ವೇಜ್‌ನಲ್ಲಿ ಪಬ್ಲಿಷ್ ಮಾಡಬಹುದು.

ಶ್ರೀ ಎಸ್ ಎಂ. ಕೃಷ್ಣ:- ಆ ವರದಿ ಬಂದಾಗ ಆದನ್ನು ಲೋಕಲ್ ಲಾಂಗ್ವೇಜ್‌ನಲ್ಲಿ ತರ್ಜುಮೆ ಮಾಡಿ ನಾವು ಆದನ್ನು ಪಬ್ಲಿಷ್ ಮಾಡಬಹುದು.

ಶ್ರೀ ಆರ್.ವಿ. ದೇಶಪಾಂಡೆ : ಈಗ ರೆಗ್ಯುಲರೇಟರಿ ಬೋರ್ಡ್ ಛೇರ್‌ಮೆನ್ inner domb ಕೆಲಸ ಬಂದ್ ಮಾಡಿದ್ದೇವೆ ಎಂದು ಒಪ್ಪಿಕೊಂಡಿದ್ದಾರೆ. Why he has ordered stoppage of inner dome work, because he is also doubtful, because there has been deviations in the design tomorrow if report comes against the project, ಈಗ ನಾವು ಏನು ಸೇಫ್ಟ್‌ನೆಸ್‌ನಿಂದ ಹಣ ಖರ್ಚು ಮಾಡುತ್ತಿದ್ದೇವೆ ಅದು ವ್ಯರ್ಥವಾಗುತ್ತಿದೆ. why not the entire work is stopped in Kaiga project now.

ಶ್ರೀ ಎಸ್.ಎಂ .ಕೃಷ್ಣ : ಅಲ್ಲಿ ಏನು ಕೆಲಸ ನಡೆಯುತ್ತಿದೆ my approach to this would be, they are all peripheral activities. ಆದುದರಿಂದ ಪ್ರಾಜೆಕ್ಟ್‌ನ ಎಲ್ಲಾ ಕೆಲಸವನ್ನು ನಿಲ್ಲಿಸಿ ಎಂದು ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದರೆ ಅವರು ನಮಗೆ ಉತ್ತರ ಏನು ಹೇಳುತ್ತಾರೆಂದರೆ ತನಿಖಾ ಸಮಿತಿಯ ವರದಿ ಬಂದಮೇಲೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳೋಣ ಎಂದು ಹೇಳುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಮುಖ್ಯಮಂತ್ರಿಯವರು ಅಲ್ಲಿ ಭಯದ ವಾತಾವರಣ ಇದೆ ಎಂದು ಒಪ್ಪಿಕೊಳ್ಳುತ್ತಾರೆ. ಸಾಧರಣವಾಗಿ ಇದು ಆಗಿದ್ದುದು ಸರಿ ನಮ್ಮದು ಕನ್‌ಸರ್ನ್ ಇದೆ ಎಂದು ತಾವು ಹೇಳಿದಾಗ, ಪ್ರಧಾನ ಮಂತ್ರಿಯವರು ಕನ್‌ಸರ್ನ್ ಇದೆ ಎಂದು ಹೇಳುತ್ತಾರೆ. ಆದರೆ ರಾಜ್ಯ ಸರ್ಕಾರದ ಹೊಣೆ ಏನಿದೆ when we are a welfare state, ನ್ಯೂಕ್ಲಿಯರ್ ಪವರ್‌ನಿಂದ ಎನರ್ಜಿ ಜನರೇಟ್ ಆಗುವುದು, ಅಥವಾ ಪವರ್ ಜನರೇಟ್ ಆಗುವುದು, ಅದು ಬೇರೆ ವಿಷಯ. You also feel, P.M. has also expressed his concern why not the State Government tries to pressuries the Central Government to stop work till the reports come. You can take up the matter with the Government of India. ಭಾರತ ಸರ್ಕಾರ ಒಪ್ಪಿಗೆ ಕೊಡುವುದು ಬೇರೆ ವಿಷಯ.

SRI S..M.Krishna : We will take it up with the Government of India..

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಬಹಳ ಮುಖವಾದದುದು ಏನೆಂದರೆ ವಿದ್ಯುಚ್ಛಕ್ತಿ ಅಭಿವೃದ್ಧಿಯ ಸಂಕೇತ. ಹಾಗೆಂದು ಹೇಳಿ ಇಡೀ ಮನುಕುಲವನ್ನು ವಿನಾಶಕ್ಕೆ ಕೊಂಡೊಯ್ಯುವಂತೆ ಆಗಬಾರದು. ರಷ್ಯಾದ ಚರ್ನಬೈಲಿನಲ್ಲಿ ಆದಂತಹ ಲೀಕೇಜ್ ಜಗತ್ತಿನ ಗಮನಸೆಳೆಯಿತು. ಇಲ್ಲಿ ನಮ್ಮ ಕನ್ಸ್‌ಟ್ರಕ್ಷನ್‌ನ ಕಾಲದಲ್ಲಿ ಗೊಮ್ಮಟದ ಒಳಗಡೆ ಡ್ಯಾಮೆಜ್ ಎನ್ನುವಂಥಾದ್ದು ಇದೆಯಲ್ಲ ಇದು ಕೇವಲ ಅಲ್ಲಿಗೆ ಸೀಮಿತವಾದುದಲ್ಲ.

It is a national problem. Humanity ಒಟ್ಟು ಮನುಕುಲದ ಬದುಕು ಸಾವುಗಳ ಪ್ರಶ್ನೆಯಾದುದರಿಂದ ನೀವು ಕನ್‌ಟ್ರಕ್ಷನ್ ಒಂದು ಕಡೆ ಕಾಸ್ಟ್ ಮತ್ತೊಂದು ಎನ್ನುವುದಕ್ಕಿಂತ ತನಿಖೆ ಆಗುವತನಕ, ವರದಿ ಬರುವ ತನಕ, ಡೀವಿಯೇಷನ್ ಎಂದು ಏನು ಹೇಳಿದ್ದಾರೆ ಅದನ್ನು ಒಪ್ಪಿಕೊಂಡಿರುವುದರಿಂದ, ಅದನ್ನು ನಿಲ್ಲಿಸಿ ಪರಿಪೂರ್ಣವಾದಂತಹ ತನಿಖೆ ಮಾಡಿ ಶಂಕಾತೀತವಾಗಿ ಇದರ ಕೆಲಸ ಮುಂದುವರೆಯಬೇಕು ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಎಸ್.ಎಂ. ಕೃಷ್ಣ : ಅದಕ್ಕೆ ನಾನು ಸಹಮತವನ್ನು ವ್ಯಕ್ತಪಡಿಸುತ್ತೇನೆ.